ಅ.ದಾ. ನಂ.18/2018

ಪಿಡಬ್ಲೂ : 1

ಸಾಕ್ಷಿಯನ್ನು ಇಂದು ದಿನಾಂಕ:30-10-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪ್ರತಿವಾದಿ 7 ಮತ್ತು 8 ರವರ ಪಾಟೀ ಸವಾಲು ಶ್ರೀ ಎ ಕೆ ಕೆ ವಕೀಲರಿಂದ**

1. ಕಲ್ಲಪ್ಪನ ಮನೆತನಕ್ಕೆ ಎಷ್ಟು ಆಸ್ತಿಗಳಿದ್ದವು ನನಗೆ ಗೊತ್ತು ಒಂದೇ ಆಸ್ತಿ ಇದ್ದು ಅದು 42 ಎಕರೆ ಇತ್ತು. ಅದರ ಸರ್ವೇ ನಂಬರ ಎಂದರೆ 69 ಮತ್ತು 67 ಒಂದೇ ಸರ್ವೇ ನಂಬರ ಇತ್ತು ನಂತರ ಬೇರ್ಪಡೆ ಆಗಿದೆ ಎಂದು ಹೇಳುತ್ತಾರೆ. ಕಲ್ಲಪ್ಪನ ಮಗ ಚೆನ್ನಪ್ಪ ಇತನ ಪಾಲಿಗೆ 15 ಎಕರೆ ಜಮೀನು ಬಂದಿದೆ. ಮನೆ ಒಂದೆ ಇದೆ. ಆತನಿಗೆ ಒಂದು ಮನೆ ಬಂದಿದೆ. ಸದರಿ ದಾವೆಯಲ್ಲಿ ಆ ಮನೆಯನ್ನು ಸೇರಿಸಿಲ್ಲ ಎಂದರೆ ನಿಜ. ಚೆನ್ನಪ್ಪ ನನ್ನ ಅಜ್ಜ. ಅಂದರೆ ನನ್ನ ತಾಯಿಯ ತಂದೆ.

2. 1998 ರಲ್ಲಿ ಚೆನ್ನಪ್ಪ ಮಕ್ಕಳು ವಾಟ್ನಿ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನನ್ನ ತಾಯಿಗೆ ಗೊತ್ತು. ಚೆನ್ನಪ್ಪನ ಮಕ್ಕಳು ವಾಟ್ನಿ ಆದ ನಂತರ ಸರ್ವೇ ನಂಬರ 68/3 ಮತ್ತು 69/3 ಬ ಜಮೀನುಗಳು 2 ನೇ ಪ್ರತಿವಾದಿಗೆ ಪಾಲಿಗೆ ಬಂದಿವೆ ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಗೊತ್ತು ಎಂದು ಹೇಳುತ್ತಾರೆ. ಅದೇ ರೀತಿ ಸರ್ವೇ ನಂಬರ 68/3 ಸಿ ಮತ್ತು 69/3 ಸಿ ಜಮೀನುಗಳು ಮೃತ ಪ್ರತಿವಾದಿ 3 ಇತನ ಪಾಲಿಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ.

3. ಅದೇ ರೀತಿ ನಿಂಗಪ್ಪನ ಪಾಲಿಗೆ ಸರ್ವೇ ನಂಬರ 68/3 ಎ ಮತ್ತು 69/3 ಎ ಜಮೀನುಗಳು ನಿಂಗಪ್ಪನ ಪಾಲಿಗೆ ಬಂದಿವೆ ಎಂದರೆ ಹೋಗಿರಬಹುದು ನನಗೆ ಗೊತ್ತಿಲ್ಲ. ಸದರಿ ವಾಟ್ನಿ ಆದ ವಿಷಯ ನನ್ನ ತಾಯಿಗೆ ಗೊತ್ತಿತ್ತು ಎಂದರೆ ನಿಜ. ನನ್ನ ತಾಯಿ ಸದರಿ ವಾಟ್ನಿಗೆ ಯಾವುದೇ ರೀತಿಯಿಂದ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಅವಳು ಇದ್ದಾಗಲೇ ತಕರಾರು ಮಾಡುತ್ತಾ ಬಂದಿರುತ್ತಾಳೆ. ನನ್ನ ತಾಯಿ ಆ ರೀತಿಯಿಂದ ತಕರಾರನ್ನು 30 ರಿಂದ 40 ವರ್ಷಗಳಿಂದ ಮಾಡುತ್ತಾ ಬಂದಿರುತ್ತಾಳೆ. ಸದರಿ ನನ್ನ ತಾಯಿ ಆ ಸಮಯದಲ್ಲಿ ಪಾಲು ಕೇಳಿಲ್ಲ ನನ್ನ ಹೆಸರಿಗೆ ಜಮೀನು ಇದೆ ಎಂದು ಕುಳಿತಿರುತ್ತಾಳೆ.

4. 2 ನೇ ಪ್ರತಿವಾದಿ ತನ್ನ ಜಮೀನನ್ನು 2011 ರಲ್ಲಿ ಖರೀದಿಗೆ ತೆಗೆದಿದ್ದ ಎಂದರೆ ನನಗೆ ಗೊತ್ತಿಲ್ಲ. ಆಗ 7 ನೇ ಪ್ರತಿವಾದಿ ಮಹಾದೇವಪ್ಪ ಮಣೂರು 76 ಸಾವಿರ ಹಣಕ್ಕೆ ಖರೀದಿ ತೆಗೆದುಕೊಳ್ಳಲು ಇಚ್ಚೆ ವ್ಯಕ್ತಪಡಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 11-07-2011 ರಂದು

7ನೇ ಪ್ರತಿವಾದಿಗೆ 2ನೇ ಪ್ರತಿವಾದಿ ಒಪ್ಪಿಕೊಂಡು ಖರೀದಿ ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2011 ರಿಂದ ಸರ್ವೇ ನಂಬರ 69/3ಬ ಜಮೀನನ್ನು 7ನೇ ಪ್ರತಿವಾದಿ ಸದರಿ ಜಮೀನನ್ನು ಕಬ್ಜಾ ವಹಿವಾಟು ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. 2013 ರಲ್ಲಿ ಕಲ್ಲಪ್ಪ ಚೆನ್ನಪ್ಪ ಗಿರಕಿ ಮೃತ 3ನೇ ಪ್ರತಿವಾದಿ ತನ್ನ ಪಾಲಿಗೆ ಬಂದ ಜಮೀನನ್ನು ಮಾರಾಟಕ್ಕೆ ತೆಗೆದಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಸಂಜೀವ 8ನೇ ಪ್ರತಿವಾದಿ 70 ಸಾವಿರ ರೂಪಾಯಿ ಹಣಕ್ಕೆ 1 ಎಕರೆ ಜಮೀನನ್ನು ಖರೀದಿಗೆ ತೆಗೆದುಕೊಳ್ಳಲು ಒಪ್ಪಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 3ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ದಿನಾಂಕ 15-04-2013 ರಂದು ಖರೀದಿ ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

5. 7 ಮತ್ತು 8 ನೇ ಪ್ರತಿವಾದಿಯರು ಖರೀದಿ ಮಾಡಿದಾಗಿನಿಂದ ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡಿ ಜಮೀನುಗಳನ್ನು ಅಭಿವೃದ್ದಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 7 ಮತ್ತು 8ನೇ ಪ್ರತಿವಾದಿಯರು ಅವರೇ ಸ್ವತಹ ಸ್ವಾಧೀನದಲ್ಲಿದ್ದು ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಈ ದಾವೆಯನ್ನು ಪ್ರತಿವಾದಿ 1 ರಿಂದ 6 ರವರ ಜೊತೆ ಮಿಲಾಪೆಯಾಗಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1998 ರಿಂದ ನನ್ನ ತಾಯಿ ದಾವಾ ಆಸ್ತಿಗಳ ಮೇಲೆ ಎಂದು ಕಬ್ಜಾವಹಿವಾಟು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ಮಾವಂದಿರಾದ ಪ್ರತಿವಾದಿ 1 ರಿಂದ 6 ರವರ ಜೊತೆ ಸೇರಿ ದಾವಾ ಆಸ್ತಿ ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಖೊಟ್ಟಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1998 ರಲ್ಲಿ ಆದ ವಾಟ್ನಿ ಪ್ರಕಾರ ಇಲ್ಲಿಯವರೆಗೆ ಅದನ್ನು ರದ್ದುಪಡಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

6. ಆ ರೀತಿಯಾಗಿ ತಕರಾರು ಮಾಡಿ ನನ್ನ ತಾಯಿ 9 ವರ್ಷಗಳಾಗಿವೆ. ಸದರಿ ತಕಾರಾರನ್ನು ಇದೇ ನ್ಯಾಯಾಲಯದಲ್ಲಿ ಮಾಡಿರುತ್ತಾರೆ. ಸದರಿ ತಕರಾರು ಮಾಡಿದ ನಂತರ ದಾವೆ ಚಾಲ್ತಿಯಲ್ಲಿದೆ. ವಿನಾ ಕಾರಣ ಪ್ರತಿವಾದಿ 7 ಮತ್ತು 8 ರವರಿಗೆ ತೊಂದರೆ ಕೊಡುವ ಸಲುವಾಗಿ ಇದೊಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅ.ದಾ. ನಂ.18/2018
ಪಿಡಬ್ಲೂ : 1

**ಪ್ರತಿವಾದಿ 1,2, 4 ಮತ್ತು 5 ರವರ ಪರ ವಕೀಲರನ್ನು ಕೂಗಲಾಗಿ ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪ್ರತಿವಾದಿ 3 ಎ ರಿಂದ 3 ಡಿ ರವರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಪಾಟೀ ಸವಾಲಿಗಾಗಿ ಮುಂದುಡಲಾಯಿತು.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ